Office of the Principal Director,
Karnataka State Audit and Accounts Department,
T.T.M.C Building,
3rd floor, A Block, BMTC Shanthinagara,
Bengaluru-560 027.
Phone No:- 080- 22215273
Fax No.:- 080- 22216500
E-mail: controllerstateaccounts@yahoo.com

ಪ್ರಧಾನ ನಿರ್ದೇಶಕರ ಕಚೇರಿ,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ,
ಟಿ.ಟಿ.ಎಂ.ಸಿ ಕಟ್ಟಡ,
3ನೇ ಮಹಡಿ, ಎ ಬ್ಲಾಕ್, ಬಿಎಂಟಿಸಿ ಶಾಂತಿನಗರ,
ಬೆಂಗಳೂರು-560 027.
ದೂರವಾಣಿ ಸಂಖ್ಯೆ:- 080- 22215273
ಫ್ಯಾಕ್ಸ್ ಸಂಖ್ಯೆ:- 080- 22216500
ಇ-ಮೇಲ್: controllerstateaccounts@yahoo.com

ಸಂಖ್ಯೆ: ರಾಲೆಪ 01 ಸಿದ್ವಿಬ 2017 (ಕಿಬಕ) /2972. ದಿನಾಂಕ: 09.01.2023.

## ಸುತ್ತೋಲೆ-2:

ವಿಷಯ: ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಗ್ರೂಪ್ ಡಿ ನೌಕರರಿಗೆ ಗ್ರೂಪ್ ಸಿ ವೃಂದದ ಕಿರಿಯ ಲೆಕ್ಕ ಸಹಾಯಕರ ಹುದ್ದೆಗೆ ಮುಂಬಡ್ತಿ ನೀಡುವ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ/02/ಸೆಹಿಮು/2022, ದಿನಾಂಕ: 28.12.2022.
2. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ/240/ಸೇನೆನಿ/2022, ದಿನಾಂಕ: 31.12.2022.
3. ಈ ಕಛೇರಿ ಸಮ ಸಂಖ್ಯೆ ಸುತ್ತೋಲೆ ದಿನಾಂಕ:05.01.2023.
4. ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು 2012 ಮತ್ತು ತಿದ್ದುಪಡಿ ನಿಯಮ 2022.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(3)ರ ಈ ಕಛೇರಿ ಸುತ್ತೋಲೆಯಲ್ಲಿ ಕನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಗ್ರೂಪ್ ಡಿ ನೌಕರರಿಗೆ ಗ್ರೂಪ್ ಸಿ ವೃಂದದ ಕಿರಿಯ ಲೆಕ್ಕ ಸಹಾಯಕರ ಹುದ್ದೆಗೆ ಮುಂಬಡ್ತಿ ನೀಡುವ ಕುರಿತಂತೆ ತಿಳಿಸಲಾದ ದಾಖಲಾತಿ ಪಟ್ಟಿಯಲ್ಲಿ ಕ್ರಸಂ.4 ರ ನಂತರ ಈ ಕೆಳಕಂಡ ದಾಖಲೆಯನ್ನು ಒದಗಿಸುವಂತೆ ತಿಳಿಸಿ ಸದರಿ ಸುತ್ತೋಲೆಯನ್ನು ಮುಂದುವರೆಸಲಾಗಿದೆ.

5. ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು 2012ರ ನಿಯಮ 3(2)ರಲ್ಲಿ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗದ ಹೊರತು, ಕಿರಿಯ ಸಹಾಯಕ/ ದ್ವಿತೀಯ ದರ್ಜೆ ಸಹಾಯಕ ಅಥವಾ ಸಮಾನ ಉನ್ನತ ಹುದ್ದೆಯ ವೃಂದಕ್ಕೆ ವರ್ಗಾವಣೆಗೆ ಅಥವಾ ಮುಂಬಡ್ತಿಗೆ ಅರ್ಹನಾಗತಕ್ಕದ್ದಲ್ಲವೆಂದು ತಿಳಿಸಲಾಗಿದೆ. ಆದಕಾರಣ ಗ್ರೂಪ್- ಡಿ ಹುದ್ದೆಯಿಂದ ಕಿರಿಯ ಲೆಕ್ಕ ಸಹಾಯಕರ ಹುದ್ದೆಗೆ ಮುಂಬಡ್ತಿ ಹೊಂದಲು ಕಿಯೋನಿಕ್ಸ್ ಸಂಸ್ಥೆ ವತಿಯಿಂದ ನಡೆಸಲಾಗುವ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಬಗೆಗಿನ ಪ್ರಮಾಣ ಪತ್ರವನ್ನು ಹೊಂದಿರುವ ಅಭ್ಯರ್ಥಿಗಳ ಮುಂಬಡ್ತಿ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದು.

ಪ್ರಧಾನ ನಿರ್ದೇಶಕರು,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ,
ಬೆಂಗಳೂರು.

ಪ್ರತಿಯನ್ನು :

1. ಅಪರ ನಿರ್ದೇಶಕರು, ಪ್ರಾಂತೀಯ ಕಛೇರಿ, ಬೆಂಗಳೂರು/ಮೈಸೂರು/ಕಲಬುರಗಿ/ಬೆಳಗಾವಿ
2. ಪ್ರಧಾನ ಮುಖ್ಯ ಲೆಕ್ಕಾಧಿಕಾರಿಗಳು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಆಲಮಟ್ಟಿ, ವಿಜಯಪುರ.
3. ಮುಖ್ಯ ಲೆಕ್ಕಾಧಿಕಾರಿಗಳು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಭೀಮರಾಯನಗುಡಿ
4. ಎಲ್ಲಾ ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲಗಳಿಗೆ.
5. ಈ ಇಲಾಖೆಯ ಎಲ್ಲಾ ಗ್ರೂಪ್ 'ಡಿ' ಸಿಬ್ಬಂದಿ ವರ್ಗದವರಿಗೆ.
6. ಸಿಸ್ಟಮ್ ಅನಾಲಿಸ್ಟ್ ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಲು.
7. ಕಛೇರಿ ಪ್ರತಿ.